ಕ್ರಿಮಿನಲ್ ಮಿಸ್. ನಂ **52/21**

ಪಿ.ಡಬ್ಲ್ಯೂ- **1**

ಸಾಕ್ಷಿಯು ದಿನಾಂಕ- **24-01-2026** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು- ಎದುರುದಾರರ ಪರ ಶ್ರೀ ಎಂ ಅರ್ ವಕೀಲರಿಂದ-

ನನ್ನ ಮುಖ್ಯ ವಿಚಾರಣೆಯಲ್ಲಿ ಎದುರುದಾರ ಸಂ.1 ನ್ಯಾಷನಲ್ ಟೈಲ್ಸ್ ನ ಪ್ರೊಪ್ರಿಯೆಟರ್ ಆಗಿರುತ್ತಾರೆ ಎಂದು ಹೇಳಿದ್ದು, ಸದರಿ ಕಂಪನಿಯ ವ್ಯಾಟ್ ಡಿಟೇಲ್ಸ್ ಇರುವ ದಾಖಲೆಯಲ್ಲಿ ಎದುರದಾರ ಸಂ.4 ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಎದುರುದಾರ ಸಂ.1 ರವರೇ ಈ ಕಂಪನಿಯನ್ನು ನಡೆಸುತ್ತಿದ್ದು, ಅವರೇ ಈ ಕಂಪನಿಯ ಮಾಲೀಕರು ಆಗಿರುತ್ತಾರೆ, ಎದುರುದಾರ ಸಂ.4 ಎಂದಿಗೂ ಅಂಗಡಿಯಲ್ಲಿ ಕೂರುವುದಿಲ್ಲ, ಹೀಗಿದ್ದರೂ ಸಹ ಅವರ ಹೆಸರನ್ನು ಈ ದಾಖಲೆಯಲ್ಲಿ ಸುಮ್ಮನೆ ತೋರಿಸಲಾಗಿದೆ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ದಾಖಲೆಯನ್ನು ಗುರುತಿಸಿಲ್ಲ. ಸದರಿ ಕಂಪನಿಯ ಎಲ್ಲಾ ದಾಖಲೆಗಳು ಎದುರದಾರ ಸಂ.4 ರವರ ಹೆಸರನ್ನೇ ತೋರಿಸುತ್ತಿದೆ ಎಂದರೆ ಸಾಕ್ಷಿ ನಾನು ಗೂಗಲ್ ನಲ್ಲಿ ಈ ಕಂಪನಿ ಬಗ್ಗೆ ಸರ್ಚ ಮಾಡಿದಾಗ ಸಹ ಎದುರದಾರ ಸಂ.4 ರವರ ಹೆಸರನ್ನೇ ತೋರಿಸುತ್ತಿದೆ, ಆದರೆ ಸದರಿ ಕಂಪನಿಯನ್ನು ನಿಜವಾಗಿಯೂ ಎದುರದಾರ ಸಂ.1 ರವರು ನಡೆಸುತ್ತಿದ್ದಾರೆ, ಸದರಿಯವರು ಗ್ಯಾಲಕ್ಸಿ ಕಂಪ್ಯೂಟರ್ ಸಾಫ್ಟವೇರ್ ಅಂಡ್ ಸೇಲ್ಸ್ ಸರ್ವೀಸ್ ನಡೆಸುತ್ತಾರೆ, ನಾನು ಈ ಬಗ್ಗೆ ನ್ಯಾಯಾಲಯದಲ್ಲಿ ಹೇಳಿದ ನಂತರ ಜಿ ಎಸ್ ಟಿ ಸಸ್ಪೆಂಶನ್ ಸಲ್ಲಿಸಿರುತ್ತಾರೆ, ಈ ಕುರಿತು ನಾನು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಷನಲ್ ಟೈಲ್ಸ್ ಕಂಪನಿಗೆ ಸಂಬಂಧಪಟ್ಟ ವ್ಯಾಟ್ ಹಾಗೂ ಜಿ ಎಸ್ ಟಿ ದಾಖಲೆಗಳು ಎದುರುದಾರ ಸಂ.1 ರವರ ಹೆಸರಿನಲ್ಲಿ ಇರುವ ಯಾವುದಾದರೂ ಒಂದು ದಾಖಲೆ ಹಾಜರುಪಡಿಸಿರುತ್ತೀರಾ? ಎಂದರೆ ಸಾಕ್ಷಿ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೆನೆ, ಈ ದಾಖಲೆ ಸಹ ಇದೆ, ಅದರ ಬಗ್ಗೆ ನಮ್ಮ ವಕೀಲರಿಗೆ ಗೊತ್ತು, ಅವರು ಮುಂದೆ ಸಲ್ಲಿಸಬಹುದು ಎಂದು ನುಡಿಯುತ್ತಾರೆ. ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿ, ಈ ಕಂಪನಿಗೆ ಸಂಬಂಧಪಟ್ಟ ಜಿ ಎಸ್ ಟಿ ಹಾಗೂ ವ್ಯಾಟ್ ದಾಖಲೆಗಳನ್ನು

ಪಡೆದಿರುತ್ತೀರಾ ಎಂದರೆ ಸಾಕ್ಷಿ ನನಗೆ ಅದೇಲ್ಲಾ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನ್ಯಾಷನಲ್ ಟೈಲ್ಸ್ ಕಂಪನಿಯಲ್ಲಿ ನನ್ನ ಗಂಡ ಕೆಲಸ ಮಾಡುತ್ತಿದ್ದಾರೆ, ಅವರಿಗೆ ತಿಂಗಳಿಗೆ ರೂ.20 ಸಾವಿರ ಸಂಬಳ ಎಂದರೆ ಸಾಕ್ಷಿ ನನ್ನ ಗಂಡನೇ ಈ ಕಂಪನಿಯ ಮಾಲೀಕರು ಹಾಗೂ ಸದರಿಯು ಕಂಪನಿಯಾಗಿರುವುದರಿಂದ ಅದರಲ್ಲಿ ನನ್ನ ಗಂಡ ಕೆಲಸಕ್ಕೆ ಇರುವ ಪ್ರಮೇಯ ಇಲ್ಲ ಎಂದು ನುಡಿಯುತ್ತಾರೆ. ಡೆಲ್ ಕಂಪನಿಯ ಡೀಲರ್ ಶೀಪ್ ನ್ನು ಎದುರುದಾರ ಸಂ.1 ರವರು ಪಡೆದಿರುವ ಬಗ್ಗೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಸಿಕ್ಕ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಷನಲ್ ಟೈಲ್ಸ್ ಕಂಪನಿಗೆ ಎದುರುದಾರ ಸಂ.4 ರವರೇ ಮಾಲೀಕರು, ಎದುರುದಾರ ಸಂ.1 ಅಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಹೆಚ್ಚಿನ ಜೀವನಾಂಶ ಪಡೆಯುವ ಸಲುವಾಗಿ ಸುಳ್ಳು ಮಾಹಿತಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರ ಸಂ.1 ರವರ ಹೆಸರಿನಲ್ಲಿ ಕಂಪನಿಗಳು ಹಾಗೂ ಡೀಲರ್ ಶಿಪ್ ಇವೆ ಎಂದು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಎದುರುದಾರ ಸಂ.1 ರವರು ತಮಗೆ ಬರುವ ರೂ.20 ಸಾವಿರ ಸಂಬಳದಲ್ಲಿ ನನಗೆ ಜೀವನಾಂಶ ಮೊತ್ತ ಕೊಟ್ಟು, ಅವರ ತಾಯಿಯನ್ನು ಸಹ ನೋಡಿಕೊಳ್ಳಬೇಕು ಎಂದರೆ ಸಾಕ್ಷಿ ಕ್ಯೂಮೇ ಸಾಫ್ಟವೇರ್ ಸೊಲ್ಯೂಷನ್ ಪ್ರೈ ಲಿ., ನಲ್ಲಿ ಎದುರುದಾರ ಸಂ.2 ಮತ್ತು 4 ರವರು ನಿರ್ದೇಶಕರಾಗಿದ್ದು, ನನ್ನ ಗಂಡ ಸದರಿ ಕಂಪನಿಯ ಮಾಲೀಕರಾಗಿರುತ್ತಾರೆ, ಹೀಗಿರುವಾಗ ಎದುರುದಾರ ಸಂ.2 ರವರನ್ನು ನೋಡಿಕೊಳ್ಳುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಎದುರುದಾರ ಸಂ.2 ಯಾವುದೇ ಕಂಪನಿಯ ನಿರ್ದೇಶಕರಲ್ಲ ಎಂದರೆ ಸರಿಯಲ್ಲ. ನಾನು ಇದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಎದುರುದಾರ ಸಂ.2 ಮತ್ತು 4 ರವರು ಈ ಮೇಲೆ ಹೇಳಿದ ಕಂಪನಿಯಲ್ಲಿ ನಿರ್ದೇಶಕರು ಆಗಿರುತ್ತಾರೆ ಎಂಬ ಬಗ್ಗೆ ಅರ್ಜಿಯಲ್ಲಿ ಬರೆದಿರುತ್ತೀರಾ ಎಂದರೆ ಸಾಕ್ಷಿ ನನಗೆ ಅಷ್ಟಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ಅಸೆಸ್ ಅಂಡ್ ಲಿಯಬಿಲಿಟಿಯಲ್ಲಿ ಏನು ಬರೆಯಲಾಗಿದೆ ಎಂಬ ಮಾಹಿತಿ ಅಷ್ಟಾಗಿ ಇಲ್ಲ, ಆದರೆ ಸದರಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ. ನಿಮ್ಮ ಅಸೆಸ್ ಅಂಡ್ ಲಿಯಬಿಲಿಟಿಯಲ್ಲಿ ಬರೆದ ಮಾಹಿತಿ ನಿಮಗೆ ಗೊತ್ತಿಲ್ಲವೇ ಎಂದರೆ ಸಾಕ್ಷಿ ಸದರಿ ದಾಖಲೆಯನ್ನು ನೋಡಿ, ಸದರಿಯಲ್ಲಿ ಬರೆದ ಮಾಹಿತಿ ನನಗೆ ಗೊತ್ತಿದೆ,

ಹಾಗೂ ಅದಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆ ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ದಾಖಲೆಯಲ್ಲಿ ಕಂಪ್ಯೂಟರ್ ಗ್ಯಾಲಕ್ಸಿ ಕಂಪನಿಯನ್ನು, ಡೆಲ್ ಕಂಪನಿಯ ಡೀಲರ್ ಶಿಪ್ ನ್ನು, ಕ್ಯೂಮೆ ಸಾಫ್ಟ್ ವೇರ್ ಸೊಲ್ಯೂಷನ್ ಕಂಪನಿಯನ್ನು ಎದುರುದಾರ ಸಂ.1 ರವರು ನಡೆಸುತ್ತಾರೆ ಎಂಬ ಬಗ್ಗೆ ಬರೆಸಿರುತ್ತಿರಾ ಎಂದರೆ ಸಾಕ್ಷಿ ಇವುಗಳ ಬಗ್ಗೆ ನನಗೆ ನಂತರ ತಿಳಿಯಿತು, ಹೀಗಾಗಿ ಬರೆಸಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಪ್ರತಿ ತಿಂಗಳು ರೂ.20 ಸಾವಿರ ವೈದ್ಯಕೀಯ ಖರ್ಚಿಗೆ ಬೇಕಾಗುತ್ತದೆ ಎಂದು ಹೇಳಿದ್ದು, ಇದಕ್ಕೆ ಸಂಬಂಧಪಟ್ಟ ವಿವರವನ್ನು ಅಂದರೆ ಯಾವ ಅನಾರೋಗ್ಯದಿಂದ ನೀವು ಬಳಲುತ್ತಿದ್ದೀರಾ ಎಂದು ಅದರಲ್ಲಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಕೈ ಸಾಲದ ಬಗ್ಗೆ ಈ ದಾಖಲೆಯಲ್ಲಿ ಬರೆದಿದ್ದು, ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಆ ದಾಖಲೆಗಳು ಯಾವುದು ಇಲ್ಲ, ಅದು ಕೈ ಸಾಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ರೂ.2 ಲಕ್ಷ ಕೈ ಸಾಲ ಪಡೆದಿರುತ್ತೇವೆ, ಎಂದು ಸುಳ್ಳು ಮಾಹಿತಿ ಕೊಟ್ಟು ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಯಲ್ಲಿ ಬರೆದ ಎಲ್ಲಾ ಮಾಹಿತಿ ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ನಾನು ಬಿ ಕಾಂ ಪದವೀದರೆ. ಎದುರುದಾರ ಸಂ.1 ರವರಿಗೆ ನಾನು ಹೇಳಿದಂತೆ ರೂ.8 ರಿಂದ 9 ಲಕ್ಷ ಆದಾಯ ಪ್ರತಿ ತಿಂಗಳಿಗೆ ಇಲ್ಲ ಎಂದರೆ ಸರಿಯಲ್ಲ. ಅವರಿಗೆ ರೂ.20 ಸಾವಿರ ಸಂಬಳ ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ಈ ರೀತಿ ರೂ.8 ರಿಂದ 9 ಲಕ್ಷ ಪ್ರತಿತಿಂಗಳ ಆದಾಯ ಅವರು ಪಡೆಯುತ್ತಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನನಗೆ ದೊರೆತ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಂಡಿದ್ದರೂ ಸಹ ನನ್ನ ತವರು ಮನೆಯಲ್ಲಿ ನಾನು ಇರುವ ಸಲುವಾಗಿ ಅವರ ವಿರುದ್ಧ ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ನಾನು ಎದುರುದಾರರ ಜೊತೆ ಜೀವನ ಮಾಡಲು ಈಗಲೂ ತಯಾರು ಇದ್ದೇನೆ ಎಂದು ನುಡಿಯುತ್ತಾರೆ. ಸಾಕಷ್ಟು ಬಾರಿ ಪಂಚಾಯಿತಿ ನಡೆದ ನಂತರ

ಕ್ರಿಮಿನಲ್ ಮಿಸ್. ನಂ **52/21**

ಪಿ.ಡಬ್ಲ್ಯೂ- **1**

ಎದುರುದಾರರ ಮನೆಗೆ ಹೋಗುತ್ತೇನೆ ಎಂದು ಒಪ್ಪಿ ಹೋಗಿಲ್ಲ ಎಂದರೆ ಸಾಕ್ಷಿ ಪ್ರತಿ ಪಂಚಾಯಿತಿ ಆದ ನಂತರ ನಾನು ಅವರ ಮನೆಗೆ ಹೋಗಿರುತ್ತೇನೆ, ಆದರೆ ಅವರು ನನ್ನನ್ನು ಸತಾಯಿಸಿ, ಮನೆಯಿಂದ ಆಚೆ ತಳ್ಳಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

ಸಹಿ/-

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ.ಗಳು, ವಿಜಯನಗರ ಜಿಲ್ಲೆ, ಹೊಸಪೇಟೆ.